ಸಂಪರ್ಕ ಸೇವೆ ಸಾರಿಗೆ

3870(4260); ಶ್ರೀ ಮಂಜುನಾಥ ಗೌಡ ಕೆ.ಎಸ್ (ಮಾಲೂರು)

ಅ) ಮಾಲೂರು ತಾಲ್ಲೂಕಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳು ಸಂಚರಿಸುತ್ತಿರುವ ಮಾರ್ಗಗಳ ಮಧ್ಯದಲ್ಲಿ ವಾಹನಗಳು ಕೆಟ್ಟು ನಿಂತು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಹಳೆಯ ಬಸ್ಸುಗಳ ಬದಲಿಗೆ ಹೊಸ ಬಸ್ಸು ನೀಡಲು ಸರ್ಕಾರ ಯಾವ ಕ್ರಮಕ್ಕೈಗೊಂಡಿದೆ;

ಇ) ಮಾಲೂರು ತಾಲ್ಲೂಕಿನ ಗ್ರಾಮಗಳಲ್ಲಿ ವಿದ್ಯಾರ್ಥಿಗಳು, ರೈತರು, ರೋಗಿಗಳಿಗೆ ತೊಂದರೆ ಆಗದಂತೆ ಸಂಪರ್ಕ ಸಾರಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ಇದ್ದಲ್ಲಿ ಸಂಪರ್ಕ ಸಾರಿಗೆ ಸೇವೆಯ ಬಸ್ಸುಗಳನ್ನು ಯಾವಾಗ ಒದಗಿಸಲಾಗುವುದು; (ಮಾಹಿತಿ ನೀಡುವುದು)?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದ ಕೆಟ್ಟು ನಿಲ್ಲುವುದು ಗಮನಕ್ಕೆ ಬಂದಿದೆ.

ಪ್ರಸ್ತುತ ಮಾಲೂರು ಘಟಕದ ವಾಹನಗಳ ಅವಘಡ ಪ್ರಮಾಣವು (Break-down) ಪ್ರತಿ 10,000 ಕಿ.ಮೀ.ಗಳಿಗೆ 0.08 ರಷ್ಟಿದ್ದು, ಇದು ಕನಿಷ್ಟ ಪ್ರಮಾಣದಲ್ಲಿರುತ್ತದೆ. ಒಂದು ವೇಳೆ ಮಾರ್ಗಮಧ್ಯದಲ್ಲಿ ವಾಹನಗಳು ಕೆಟ್ಟು ನಿಂತ ಸಂದರ್ಭದಲ್ಲಿ ಕೂಡಲೇ ಪರ್ಯಾಯ ವ್ಯವಸ್ಥೆ ಮಾಡಲಾಗುತ್ತದೆ.

ಆ) ಮಾಲೂರು ಘಟಕದಲ್ಲಿ 97 ವಾಹನಗಳಿದ್ದು, ಅವುಗಳಲ್ಲಿ 9.00 ಲಕ್ಷ ಕಿ.ಮೀ ಮೀರಿ ಕ್ರಮಿಸಿರುವ 2 ವಾಹನಗಳು ಇರುತ್ತವೆ. 2014–15ನೇ

ಸಾಲಿನಲ್ಲಿ ಜೂನ್–14ರ ಅಂತ್ಯಕ್ಕೆ 2 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಲು ಯೋಜನೆ ಇದ್ದು, ವಾಸ್ತವವಾಗಿ ಇದುವರೆವಿಗೂ 4 ಹೊಸ ವಾಹನಗಳನ್ನು ಘಟಕಕ್ಕೆ ನೀಡಲಾಗಿದೆ.

ಇ) ಮತ್ತು ಈ) ಮಾಲೂರು ತಾಲ್ಲೂಕಿನ ಗ್ರಾಮಗಳಿಗೆ ವಿದ್ಯಾರ್ಥಿಗಳು, ರೈತರು, ರೋಗಿಗಳಿಗೆ ಅನುಕೂಲವಾಗುವಂತೆ ನಗರ ಸಾರಿಗೆ ಮಾದರಿಯಲ್ಲಿ ಮಾಲೂರು–ಕೋಲಾರ ನಡುವೆ 2 ವಾಹನಗಳನ್ನು, ಮಾಲೂರು–ಹೊಸಕೋಟೆ ನಡುವೆ 2 ವಾಹನಗಳನ್ನು, ಕೋಲಾರ–ಚಿಂತಾಮಣಿ ನಡುವೆ 4 ವಾಹನಗಳನ್ನು ಮತ್ತು ಶ್ರೀನಿವಾಸಪುರ–ಚಿಂತಾಮಣಿ ನಡುವೆ 2 ವಾಹನಗಳನ್ನು ಅಂದರೆ ಒಟ್ಟು 10 ವಾಹನಗಳನ್ನು ಸಂಪರ್ಕ ಸಾರಿಗೆ ಹೆಸರಿನಡಿ ಕಾರ್ಯಾಚರಣೆಗೊಳಿಸಲಾಗಿರುತ್ತದೆ ಉಳಿದಂತೆ ಮಾಲೂರು ತಾಲ್ಲೂಕಿನ ಲಕ್ಕೂರು, ಮಾಸ್ತಿ ಮತ್ತು ಟೀಕಲ್ ಇತ್ಯಾದಿ ಸ್ಥಳಗಳಿಗೆ ಜನಸಂದಣಿಗನುಗುಣವಾಗಿ ಸಮರ್ಪಕ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.

ಕೊಳವೆ ಬಾವಿಗಳು

3871(4273); ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಬಾಗಲಕೋಟೆ)

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;

ಆ) ಬಾದಾಮಿ ಮತ್ತು ಬಾಗಲಕೋಟೆ ತಾಲ್ಲೂಕಿನಲ್ಲಿ ಖಾಸಗಿಯಾಗಿ ಕೊಳವೆ ಬಾವಿಗಳನ್ನು ಕೊರೆಸಲು ನಿಬಂಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ನಿರ್ಬಂದದಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;